## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:1056/2024

**ಸಾಕ್ಷಿಯನ್ನು ದಿಃ 21.02.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ರಮೇಶ | ಸಿಡಬ್ಲ್ಯೂ:1 | ಪಿಡಬ್ಲ್ಯೂ:1 |
| ತಂದೆಯ ಹೆಸರು | ರಾಮು | | |
| ವಯಸ್ಸು | 29 ವರ್ಷ | | |
| ಉದ್ಯೋಗ | ಕೂಲಿ | | |
| ವಾಸಸ್ಥಳ | ಕಟ್ಟೆಮಳಲವಾಡಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಈ ಕೇಸಿನ ಮೃತ ವರಲಕ್ಷ್ಮೀ ನನ್ನ ಪತ್ನಿ. ಅವರು ಒಂದು ರಸ್ತೆ ಅಪಘಾತದಲ್ಲಿ ಮೃತ ಪಟ್ಟರು. ದಿನಾಂಕ 25.05.2024 ರಂದು ಅಪಘಾತವಾಗಿದೆ. ಸದರಿ ಅಪಘಾತವು ಬನ್ನಿಕುಪ್ಪೆ ರಸ್ತೆಯಲ್ಲಿ ಜಡಗನಕೊಪ್ಪಲು ಹತ್ತಿರವಾಗಿದೆ. ಅಪಘಾತದ ಸಮಯದಲ್ಲಿ ನನ್ನ ಪತ್ನಿ ನನ್ನೊಂದಿಗೆ ಜಗಳ ಮಾಡಿಕೊಂಡಿದ್ದರು. ಎಲ್ಲಿಗೆ ಹೋಗುತ್ತಿರುವುದಾಗಿ ನನಗೆ ಹೇಳಿಲ್ಲ. ಬೆಳಗಿನ ಜಾವ ಚಾಸಾ 7 ರವರು ನನಗೆ ಅಪಘಾತದ ಬಗ್ಗೆ ತಿಳಿಸಿದರು. ನನ್ನ ಪತ್ನಿ ಅಪಘಾತದಿಂದ ರಸ್ತೆಯಲ್ಲಿಯೇ ತೀರಿಕೊಂಡಿದ್ದಾರೆಂದು ಚಾಸಾ 7 ರವರು ತಿಳಿಸಿದರು. ನಾನು ಸ್ಥಳಕ್ಕೆ ಹೋದೆ. ನಾನು ಹೋದಾಗ ಶವವನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು. ನಂತರ ನಾನು ಮೈಸೂರಿನ ಆಸ್ಪತ್ರೆಗೆ ಹೋಗಿ ನನ್ನ ಪತ್ನಿಯ ಶವವನ್ನು ನೋಡಿದೆ. ನನ್ನ ಪತ್ನಿಯ ಹಣೆ ಮತ್ತು ಮುಖದ ಮೇಲೆ ಏಟಾಗಿತ್ತು. ನನ್ನ ಪತ್ನಿಗೆ ಕಾರು ಡಿಕ್ಕಿಯಾಗಿದ್ದರಿಂದ ಅಪಘಾತವಾಗಿ ಮೃತಪಟ್ಟಿದ್ದಾರೆಂದು ತಿಳಿಯಿತು. ಈ ಬಗ್ಗೆ ಪೊಲೀಸರು ಹೇಳಿದರು. ನಂತರ ನಾನು

ಠಾಣೆಗೆ ಹೋಗಿ ದೂರನ್ನು ಕೊಟ್ಟೆ ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಕಾರ್ ಸಂಖ್ಯೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀಸವಾಲು ಸಸಅ ರವರಿಂದಃ-</u>**

ದಿನಾಂಕ 24.05.2024 ರಂದು ನನ್ನ ಪತ್ನಿ ಜಡಗನಕೊಪ್ಪಲು ಗ್ರಾಮಕ್ಕೆ ಕೂಲಿ ಕೆಲಸಕ್ಕೆ ಹೋದವರು ಸಂಜೆಯಾದರು ಮನೆಗೆ ವಾಪಸ್ಸು ಬರಲಿಲ್ಲ ಎಂದರೆ ಸರಿಯಲ್ಲ. ನಂತರ ನನಗೆ ಗಾಬರಿಯಾಗಿ ನಾನು ಮತ್ತು ನಮ್ಮ ಕಡೆಯವರು ಜಡಗನಕೊಪ್ಪಲು, ಬನ್ನಿಕುಪ್ಪೆ ಕಡೆಗಳಲ್ಲಿ ಹುಡುಕಾಡಿ ನನ್ನ ಪತ್ನಿ ಪತ್ತೆಯಾಗದ ಕಾರಣ ರಾತ್ರಿ ಜೋರಾಗಿ ಮಳೆ ಬರುತ್ತಿದ್ದರಿಂದ ಮನೆಗೆ ವಾಪಸ್ಸು ಬಂದೆವು ಎಂದರೆ ಸರಿ. ದಿನಾಂಕ 25.05.2024 ರಂದು ಬೆಳಿಗ್ಗೆ 10 ಗಂಟೆಗೆ ಚಾಸಾ 2 ರವರು ನನಗೆ ಫೋನ್ ಕರೆ ಮಾಡಿ ನಿನ್ನೆ ದಿನ ರಾತ್ರಿ ಅವರು ಕಾರಿನಲ್ಲಿ ಮೈಸೂರಿನಿಂದ ಹುಣಸೂರು ಕಡೆಗೆ ಬರುತ್ತಿದ್ದಾಗ ರಾತ್ರಿ ಸುಮಾರು 9.30 ಗಂಟೆಗೆ ಜಡಗನಕೊಪ್ಪಲು ಗೇಟ್ ಬಳಿ ಹಾದು ಹೋಗಿರುವ ಹುಣಸೂರು ಮೈಸೂರು ಮುಖ್ಯ ರಸ್ತೆಯ ಬದಿಯಲ್ಲಿ ಒಂದು ಹೆಂಗಸು ನಡೆದುಕೊಂಡು ಹೋಗುತ್ತಿದ್ದಾಗ ಹುಣಸೂರು ಕಡೆಯಿಂದ ಮೈಸೂರು ಕಡೆಗೆ ಹೋಗುತ್ತಿದ್ದ ಕೆಎ-09-ಎಂಸಿ-2857 ರ ಆಲ್ಟೋ ಕೆ-10 ರ ಕಾರ ಚಾಲಕ ಅದನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಒಬ್ಬ ಹೆಂಗಸಿಗೆ ಡಿಕ್ಕಿ ಮಾಡಿದ್ದು ತಕ್ಷಣ ತಾನು ಕಾರನ್ನು ನಿಲ್ಲಿಸಿ ನೋಡಲಾಗಿ ಆ ಹೆಂಗಸಿನ ಮುಖ, ಹಣೆ ಮತ್ತು ತಲೆಯ ಭಾಗಕ್ಕೆ ಏಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು ಎಂದು ನನಗೆ ಹೇಳಿದರು ಎಂದರೆ ಸರಿ.

ನಂತರ ಚಾಸಾ 2 ರವರೇ ಪೊಲೀಸ್ ಸಹಾಯವಾಣಿ 112 ಕ್ಕೆ ಕರೆ ಮಾಡಿ ಮಾಹಿತಿ ತಿಳಿಸಿದ್ದು, ಸ್ವಲ್ಪ ಸಮಯದ ಬಳಿಕ ಪೊಲೀಸರು ಸ್ಥಳಕ್ಕೆ ಬಂದು ಮೃತ ದೇಹವನ್ನು ಮೈಸೂರಿಗೆ ತೆಗೆದುಕೊಂಡು ಹೋದರು ಎಂದು ನನಗೆ ಹೇಳಿದರು ಎಂದರೆ ಸರಿ. ಈ ದಿನ ಬೆಳಿಗ್ಗೆ ತಿಳಿಯಲಾಗಿ ಅಪಘಾತದಲ್ಲಿ ಮೃತಪಟ್ಟ ಹೆಂಗಸು ನನ್ನ ಪತ್ನಿ ಎಂದು ಅವರಿಗೆ ತಿಳಿಯಿತು ಎಂಬುದಾಗಿ ನನಗೆ ಹೇಳಿದರು ಎಂದರೆ ಸರಿ. ಈ ರೀತಿ ನಾನು ಈಗ ಓದಿ ಹೇಳಿದಂತೆ ದೂರಿನಲ್ಲಿ ಹೇಳಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಜಿ ಕೆ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ದೂರಿಗೆ ಕೇವಲ ಸಹಿ ಮಾಡಿದ್ದೇನೆ. ಪೊಲೀಸರೇ ಬರೆದಿದ್ದರು. ದೂರು ಕೊಟ್ಟ ತಾರೀಖು ನೆನಪಿಲ್ಲ. ನಾನು ದೂರು ಕೊಟ್ಟಾಗ ಸಂಜೆ 5.30 ಆಗಿತ್ತು. ಪೊಲೀಸರು ದೂರನ್ನು ನನಗೆ ಓದಿ ಹೇಳಿಲ್ಲ. ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ಸಂಖ್ಯೆಯ ವಾಹನದಿಂದ ಅಪಘಾತವಾಯಿತು ಎಂದು ನನಗೆ ಗೊತ್ತಿಲ್ಲ. ಕಾರು ಎಂದು ಮಾತ್ರ ಗೊತ್ತಾಯಿತು. ಆ ದಿನ ನನ್ನ ಮತ್ತು ನನ್ನ ಪತ್ನಿಯ ಮಧ್ಯೆ ಬಾಯಿ ಮಾತಿನ ಜಗಳವಾಗಿತ್ತು. ನನ್ನ ಪತ್ನಿಯ ಕೈ ಮೇಲೆ ಗೋವಿಂದ ಎಂಬ ಅಚ್ಚೆ ಇತ್ತು ಅದು ಯಾರೆಂದು ಗೊತ್ತಿಲ್ಲ. ಸ್ನಾನ ಮಾಡಲು ನೀರು ಇಟ್ಟಿರಲಿಲ್ಲ ಎಂಬ ವಿಚಾರಕ್ಕೆ ಸಂಜೆ 3 ಗಂಟೆಗೆ ನನ್ನ ಮತ್ತು ನನ್ನ ಪತ್ನಿಯ ಮಧ್ಯೆ ಜಗಳವಾಗಿತ್ತು. ದಿನಾಂಕ 25.05.2024 ರಂದು ಜಗಳವಾಗಿತ್ತು. ಜಗಳ ಮಾಡಿಕೊಂಡು ಮನೆ ಬಿಟ್ಟು ಹೋದ ತಕ್ಷಣ ನಾನು ಪೊಲೀಸರಿಗೆ ಮಾಹಿತಿ ಕೊಟ್ಟಿಲ್ಲ. ಜಗಳ ಮಾಡಿಕೊಂಡು ಹೆಂಡತಿ ಮನೆ ಬಿಟ್ಟು ಹೋಗಿದ್ದಾಳೆಂದು ನಾನು ಅಕ್ಕಪಕ್ಕದ ಮನೆಯವರಿಗೆ ಹೇಳಿಲ್ಲ. ನನಗೆ ಅಪಘಾತದ ಬಗ್ಗೆ ಮೊದಲ ಬಾರಿಗೆ ಚಾಸಾ 7 ರವರು ಹೇಳಿದರು. ನಾನು ಚಾಸಾ 2 ರವರನ್ನು ಭೇಟಿಯಾಗಿಲ್ಲ. ಚಾಸಾ 2 ಮತ್ತು ನನಗೆ ಪರಿಚಯವಿಲ್ಲ. ಚಾಸಾ 7 ನಮ್ಮ ಊರಿನ ಅಧ್ಯಕ್ಷರು. ಅವರು ಅಪಘಾತವನ್ನು ನೋಡಿಲ್ಲ. ಚಾಸಾ 7 ರವರಿಗೆ ಅಪಘಾತ ಎಲ್ಲಿ, ಹೇಗೆ ಆಯಿತು ಎಂದು ಗೊತ್ತಿಲ್ಲ ಎಂದರೆ ಗ್ರೂಪ್ ನಲ್ಲಿ ಮಾಹಿತಿ ಹಾಕಿದ್ದರಿಂದ

ಅವರಿಗೆ ತಿಳಿದು ಬಂತು. ಯಾವ ಗ್ರೂಪ್ ಎಂದು ಗೊತ್ತಿಲ್ಲ. ಚಾಸಾ 7 ರವರಿಗೆ ಗ್ರೂಪ್ ನಲ್ಲಿ ಸಂದೇಶ ನೋಡಿ ಅಪಘಾತವಾಗಿದೆ ಎಂದು ಗೊತ್ತಾಯಿತು. ಸದರಿ ಗ್ರೂಪ್ ಗೆ ಮಾಹಿತಿ ಹಾಕಿದವರು ಯಾರೆಂದು ನನಗೆ ಗೊತ್ತಿಲ್ಲ.

ನನ್ನ ಪತ್ನಿ ಜಡಗನಕೊಪ್ಪಲಿಗೆ ಕೂಲಿ ಕೆಲಸಕ್ಕೆ ಹೋಗಿದ್ದಳು ಎಂದು ನಾನು ಬರೆಸಿಲ್ಲ. ಸಾಮಾನ್ಯವಾಗಿ ಕೂಲಿ ಕೆಲಸಕ್ಕೆ ಹೋದರೆ ಸಂಜೆ 5 – 5.30 ಗೆ ಮನೆ ಬರುತ್ತಾರೆ. ಹೆಣ್ಣು ಮಕ್ಕಳು ಕೂಲಿಗೆ 5–10 ಜನರ ಗುಂಪಾಗಿ ಹೋಗುತ್ತಾರೆಂದರೆ 2–3 ಜನ ಹೋಗುತ್ತಾರೆ. ನಮ್ಮ ಊರಿನಿಂದ ಜಡಗನಕೊಪ್ಪಲು ಸುಮಾರು 20 ರಿಂದ 25 ಕಿಲೋ ಮೀಟರ್ ದೂರ ಇದೆ. ಆ ಊರಿಗೆ ಕೂಲಿಗೆ ಹೋದರು ಕೂಡ ವಾಪಸ್ಸು ನಡೆದುಕೊಂಡು ಬರಲಾಗುವುದಿಲ್ಲ. ನನ್ನ ಪತ್ನಿ ಜಗಳಮಾಡಿಕೊಂಡು ಹೋಗಿದ್ದಳು ಎಂಬ ಕಾರಣಕ್ಕೆ ಹುಣಸೂರು ಪಟ್ಟಣದಲ್ಲಿ ಹುಡುಕಾಡಿದ್ದೆ. ನನಗೆ ಚಾಸಾ 2 ಫೋನ್ ಮಾಡಿಲ್ಲ. ನಾನು ಮೈಸೂರು ನ್ಯಾಯಾಲಯದಲ್ಲಿ ಪರಿಹಾರ ಕೋರಿ ಎಂ ವಿ ಸಿ 1202/2024 ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ಯಾವ ಕಾರು ನನ್ನ ಪತ್ನಿಗೆ ಡಿಕ್ಕಿಯಾಯಿತು ಎಂದು ಸಂಖ್ಯೆ ಗೊತ್ತಿಲ್ಲ. ಕಾರು ಬಂದು ಗುದ್ದಿದೆಯೇ ಅಥವಾ ನನ್ನ ಪತ್ನಿ ರಸ್ತೆಯ ಮಧ್ಯದಲ್ಲಿ ನಡೆದುಕೊಂಡು ಹೋಗುತ್ತಿದ್ದರೇ ನನಗೆ ಗೊತ್ತಿಲ್ಲ ಎಂದರೆ ಕಾರು ಬಂದು ಡಿಕ್ಕಿಯಾಗಿದೆ ಎಂದು ಗೊತ್ತಿದೆ. ನನ್ನ ಪತ್ನಿ ರಸ್ತೆಯ ಯಾವ ಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದರು ಎಂದು ಗೊತ್ತಿಲ್ಲ. ಕಾರು ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಯಾವ ರೀತಿ ಚಲಿಸುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಪತ್ನಿ ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಹೋಗುತ್ತಿದ್ದರು ಎಂದು ಗೊತ್ತಿಲ್ಲ. ಅವರು ಹೇಗೆ ಹೋಗುತ್ತಿದ್ದರು ಎಂಬುದನ್ನು ನೋಡಿದವರು ಯಾರು ಇಲ್ಲ ಎಂದರೆ ಸರಿ. ಪೊಲೀಸರು ಸಹಿ ಮಾಡಲು ಹೇಳಿದ ಜಾಗಗಳಲ್ಲಿ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಅಪಘಾತದ ಪರಿಹಾರ ಪಡೆದುಕೊಳ್ಳುವ ಸಲುವಾಗಿ ಒಂದು ಪ್ರಕರಣ ದಾಖಲಿಸಬೇಕಾಗಿರುವ ಕಾರಣ ಆರೋಪಿಯ ತಪ್ಪಿನಿಂದ ಅಪಘಾತವಾಗದೇ ಇದ್ದರೂ ಸಹ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇದೆ.,**

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.